ಕೇಂದ್ರ ಸರ್ಕಾರವು ರಾಜ್ಯದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನ ಉಪಕರಣಗಳನ್ನು ಒದಗಿಸುವ ಬಗ್ಗೆ

೭. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೃಷಿ ತೋಟಗಾರಿಕೆ, ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರವು ರಾಜ್ಯದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹಾಗೂ ಪ್ರೌಢ ಶಾಲೆಗಳಿಗೆ ವಿಜ್ಞಾನ ಉಪಕರಣಗಳನ್ನು ಒದಗಿಸಲು ಧನ ಸಹಾಯ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಉಪಕರಣಗಳ ಖರೀದಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದೆಂ ನಿಜವೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತನಿಖೆ ನಡೆಸಿದೆಯೇ ? ಹಾಗಿದ್ದಲ್ಲಿ ತನಿಖಾ ವರದಿಯನ್ನು ಸದನದಲ್ಲಿ ಮಂಡಿಸಲಾಗುವುದೆ?

ಶ್ರೀ ಕೆ.ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಕರ್ನಾಟಕ ಗ್ರಾಹಕರ ಸಹಕಾರಿ ಸಂಸ್ಥೆಯಂ ಒದಗಿಸಿದ ಕೆಲವು ಉಪಕರಣಗಳ ಗುಣಮಟ್ಟ, ಸಂಖ್ಯೆ ಮತ್ತು ದರಗಳ ಬಗ್ಗೆ ದೂರುಗಳು ಬಂದಿದ್ದವು.

ಇ) ದೂರುಗಳು ಬಂದೊಡನೆಯೇ ಸರ್ಕಾರವು ಆರ್ಜಿಗಳನ್ನು ಪರಿಶೀಲಿಸಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ತನ್ನ ಆದೇಶ ಸಂಖ್ಯೆ ಇಡಿ ೧೦೦ ಎಂಪಿಇ ೮೯ ದಿನಾಂಕ ೨೬-೧೨-೧೯೮೯ರಲ್ಲಿ ರಚಿಸಿತು. ಸಮಿತಿಯು ವರದಿಯನ್ನು ನೀಡಿದೆ. ಸಮಿತಿಯ ಉಪಕರಣಗಳ ಪೂರೈಕೆಯಲ್ಲಿ ಕೆಲವು ಅವ್ಯವಹಾರಗಳು ನಡೆದಿರುವುದನ್ನು ವಿಚಿತಪಡಿಸಿದೆ ಮತ್ತು ಇದರ ಬಗ್ಗೆ ಒಂದು ವಿಷದವಾದ ವಿಚಾರಣೆ ನಡೆಸಿ ಸರ್ಕಾರಕ್ಕೆ ಇದರಿಂದ ಉಂಟಾಗಿರುವ ನಷ್ಟದ ಬಗ್ಗೆ ನಿರ್ದಿಷ್ಟಪಡಿಸಿಕೊಂಡು ಇದಕ್ಕೆ ಜವಾಬ್ದಾರರಾದ ವ್ಯಕ್ತಿಗಳ ಮೇಲೆ ಜವಾಬ್ದಾರಿ ಹೊರಿಸಬೇಕೆಂದೂ ಶಿಫಾರಸ್ಸು ಮಾಡಿದೆ. ಆದ್ದರಿಂದ ಸರ್ಕಾರವು ಈ ಕೇಸ್‌ನ್ನು ಸಿಐಡಿಗೆ ಕಳಿಸಿದೆ. ಸಿಐಡಿ ಇಂದ ವರದಿ ಬಂದ ಕೂಡಲೇ ಮುಂದಿನ ಕ್ರಮ ಜರುಗಿಸಲಾಗುವುದು.

ಮಂಗಳೂರು ಅಳಿವೆ ಬಾಗಿಲಿನ ಹೂಳೆತ್ತುವ ಕಾರ್ಯದ ಬಗ್ಗೆ

೩೧೦. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ಅಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇದ್ದುದರಿಂದ ೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ನೇ ಡಿಸೆಂಬರ್‌ರವರೆಗೆ ಅಳಿವೆಗೆ ತಾಗಿ ಎಷ್ಟು ಜೀವಹಾನಿಯಾಗಿದೆ, ಎಷ್ಟು ದೋಣಿಗಳು ಮುಳುಗಿವೆ, ಎಷ್ಟು ಹಣ ಹಾನಿಯಾಗಿದೆ.

ಆ) ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ ಕೆಲಸ ಈ ವರ್ಷವಾದರೂ ಪ್ರಾರಂಭ ಮಾಡಲಾಗುವುದೆ.

ಇ) ಈ ಹೂಳೆತ್ತುವ ಕಾರ್ಯ ಯಾವಾಗ ಮುಗಿಯುವುದು,

ಈ) ಹೂಳೆತ್ತದೆ ಇರುವುದನ್ನು ಪ್ರತಿಭಟಿಸಿ ಮೀನುಗಾರರು ಧರಣಿ ಮಾಡಿರುವರೇ; ಹಾಗಿದ್ದಲ್ಲಿ ಅವರಿಗೆ ನೀಡಿರುವ ಆಶ್ವಾಸನೆಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು).—

ಅ) ಹೂಳೆತ್ತದೆ ಇರುವುದರಿಂದ ಯಾವ ಹಾನಿಯೂ ಆಗಿರುವುದಿಲ್ಲ. ಆದರೆ ಸಮುದ್ರ ಇಳಿತದಲ್ಲಿ ತೊಂದರೆಯಾಗಿದೆ.

ಆ) ಹೌದು. ಹೂಳೆತ್ತುವ ಕೆಲಸ ಪ್ರಾರಂಭಮಾಡಲಾಗುವುದು.

ಇ) ಅಳಿವೆಯಲ್ಲಿ ಅಲೆ ತಡೆಗೋಡೆಗಳು ನಿರ್ಮಿಸಿದ ನಂತರ.

ಈ) ಹೌದು. ಅವರಿಗೆ ಶೀಘ್ರವಾಗಿ ಹೂಳೆತ್ತಲಾಗುವುದು ಎಂದು ಆಶ್ವಾಸನೆ ನೀಡಲಾಗಿದೆ